ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಮೂಹ ಗೃಹಗಳ ನಿರ್ಮಾಣ

೨೯೩೫. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇನ್ನು ಮುಂದೆ ಶೇಕಡ ಇಪ್ಪತ್ತೈದರಷ್ಟು ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಿ ಉಳಿದ ಎಪ್ಪತ್ತೈದರಷ್ಟನ್ನು ಸಮೂಹ ಗೃಹಗಳ ನಿರ್ಮಾಣಕ್ಕೆ ನೀಡುವುದಾಗಿ ನಿರ್ಣಯ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಗೃಹ ಮಂಡಳಿಯಂ ವತಿಯಿಂದ ಹಿಂದೆ ನಿರ್ಮಿಸಿರುವ ಹಲವಾರು ಮನೆಗಳ ಗುಣಮಟ್ಟ ಮತ್ತು ಅವುಗಳ ಬಾಳಿಕೆ ಬಗ್ಗೆ ಜನರಲ್ಲಿ ಈಗಾಗಲೇ ಸಂಶಯ ಹುಟ್ಟಿರುವ ಹಿನ್ನೆಲೆಯಲ್ಲಿ ಇಂತಹ ನಿರ್ಧಾರವನ್ನು ಕೈಗೊಂಡಿರುವುದು ಸಮಂಜಸವೇ ?

ಇ) ಇಂತಹ ಯೋಜನೆಯನ್ನು ಕೈಬಿಟ್ಟು ಹಿಂದೆ ನಿವೇಶನ ನೀಡುತ್ತಿದ್ದಂತೆ ಸಣ್ಣ ಪ್ರಮಾಣದ ..ವೇಶನಗಳನ್ನು ಮಾತ್ರ ವಿಂಗಡಿಸಿ ಹಂಚಿಕೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ಮತ್ತು ಇ) ಸಾಮಾನ್ಯವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಗೃಹ ಮಂಡಳಿಗಳಿಂದ ನಿರ್ಮಿತವಾಗುವ ಮನೆಗಳ ಗುಣಮಟ್ಟವು ತೃಪ್ತಿಕರವಾಗಿರುತ್ತದೆ. ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ವಸತಿ ಬೇಡಿಕೆಯನ್ನು ಪೂರೈಸಲು ನಿವೇಶನಗಳ ವಿತರಣೆಯಿಂದ ಸಾಧ್ಯವಾಗುವುದಿಲ್ಲ. ಆದುದರಿಂದ ಸಮೂಹ ಗೃಹ ನಿರ್ಮಾಣವನ್ನು ಸರ್ಕಾರದ ನೀತಿಯಾಗಿ ಅಳವಡಿಸುವುದು ಸೂಕ್ತವಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಡಳಿತ ವ್ಯವಸ್ಥೆಯ ಹೀನ ಸ್ಥಿತಿಯ ಬಗ್ಗೆ

೨೯೩೮ ಶ್ರೀ ಬಿ ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಡಳಿತ ವ್ಯವಸ್ಥೆಯು ತುಂಬಾ ಹೀನ ಸ್ಥಿತಿಗೆ ಇಳಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲಾಧಿಕಾರಿಗಳನ್ನು ಅಂದರೆ, ಆಯುಕ್ತರಂ ಕಾರ್ಯದರ್ಶಿ, ಇಂಜಿನಿಯರ್ ಸಹ ಕಾರ್ಯದರ್ಶಿ ಮತ್ತು ಕೆಲವು ಅಧಿಕಾರಿಗಳನ್ನು ಎರವಲು ಸೇವೆಯ ಆಧಾರದ ಮೇಲೆ ತೆಗೆದುಕೊಂಡು ಮುಂದುವರಿಸುತ್ತಿರುವುದಂ ನಿಜವೇ ?

ಇ) ಎರವಲು ಸೇವೆಯಂತೆ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಐದು ವರ್ಷದಿಂದ ಕೆಲಸ ಮಾಡುತ್ತಿರುವ ಖಾಯಂ ನೌಕರರನ್ನು ಬೇರೆ ಕಡೆ ವರ್ಗವೆಮಾದಲು ಸರ್ಕಾರವು ಯೋಚಿಸಿದೆಯೇ

ಈ) ಈ ರೀತಿ ವರ್ಗ ಮಾಡಲು ಸರ್ಕಾರಕ್ಕೆ ಆಗುವ ತೊಂದರೆ ಏನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಹೌದು. ಎರವಲು ಸೇವೆ ನಿಯಮಗಳ ಪ್ರಕಾರ

ಇ) ಇಲ್ಲ. ಆಂತರಿಕ ವರ್ಗಾವಣೆ ಮಾಡಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ